Rega No BG 155

Sri "SATYAVADI"
— DAILY —
MYSORE 4
46 th Year

protect the cow

— శ్రీ —

ಸತ್ಯವಾದಿ
SATYAVADI

ಸಂಪಾದಕರು— ಅರಮನೆ ಸಿಂಸ್ಕೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

19—3—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ವಿವಿಧ ವಿಷಯಗಳು

ಜೈಪುರ್— ಮಂತ್ರಿಗಳ ಒಗ್ಗೆ ಪಂ ಮಿತಿ ಇಂಬೇಕೆಂದು ರಾಜಸ್ಥಾನ ಶಾಸನ ಸಭೆಯಲ್ಲಿ ಸದಸ್ಯರೊಬ್ಬರು ಹೇಳಿದರು.

ಬೆಂಗಳೂರು 17 — ಮೈ ಸೂ ರು ವಿಧಾನ ಪರಿಷತ್ತಿಗೆ ಶಾಸನ ಸಭೆಯಿಂದ ಚುನಾವಣೆಯಾಗಬೇಕಾದ 7 ಸ್ಥಾನಗಳಿಗೆ 27 ಮಂದಿ ಸ್ಪರ್ಧಿಸಿದ್ದಾರೆ

ತಿರುವೇಂದ್ರಂ 16— ಕಡಮೆ ಎಸ್ ಎಸ್ ಎಲ್ ಸಿ ಫಲಿತಾಂಶ ಪೊರೈಸ ಸ್ಕೂಲುಗಳ ಉಪಾಧ್ಯಾಯುರುಗಳ ಮತ್ತು ಮುಖ್ಯೋಪಾಧ್ಯಾಯುರ ಮೇಲೆ ಶಿಸ್ತಿ ಕ್ರಮ ತೆಗೆದುಕೊಳ್ಳಲು ಸರ್ಕಾರದ ಅಜ್ಞೆಯಾಗಿದೆ.

ಇಟಲಿಯಲ್ಲಿ 109 ದಿನಪತ್ರಿಕೆಗಳಿವೆ. ಅವುಗಳು ಒಂದು ದಿನಕ್ಕೆ 50 ಲಕ್ಷ ಪ್ರತಿ ಮಾರಾಟವಾಗುವುವು.

ವಂಗಿಯದ ಸಂಗೀತ ಎಂಬ ಕಾದಂಬರಿಯ ಹಸ್ತಪ್ರತಿಯನ್ನು ಪ್ರಕಟಣೆಗಾಗಿ ಪಶ್ಚಿಮಕ್ಕೆ ಕಳಿಸಿದ್ದಕ್ಕೆ ರಷ್ಯದ ಬಂಕುಗಾರ ಪತ್ರ ಶಿಲ್ಪಿ ಎಂ.ಕ್ಹೈಲ್ ನರೀಫ ಬಂಧಿತರಾದರೆಂದು ಪ್ಯಾರಿಸ್ಸಿನಿಂದ ವಾರ್ತೆ ಬಂದಿದೆ.

ಶ್ರೀ ಬಾಲಾಜಿ ಯಾತ್ರಾ ಕಂ

ತಾ || 21-4-62 ರಲ್ಲಿ
ಬದರೀ, ಕಾಶ್ಮೀರ್, ದ್ವಾರಕ, ಇತ್ಯಾದಿ
70 ದಿನಗಳು, ಜನತಾ ಕ್ಯಾರೇಜಿನಲ್ಲಿ

(2) ತಾ || 29-4-62
ಟೂರಿಸ್ಟ್ ಮತ್ತು 1st Class
55 ದಿನಗಳಲ್ಲಿ ಬದರೀ, ಕಾಶ್ಮೀರ್
ಅಜ್ಮೀರ್ ಜೈಪುರ್

— ವಿವರಗಳಿಗೆ —

ಎಂ. ಶುಭಾಶಾಸ್ತ್ರಿ
ಶುಭಾಲಯ, Phone 3910
ಶ್ರೀ ಕೆಂಗಲ್ ಹನುಮಂತಯ್ಯ ರೋಡ್
ಬೆಂಗಳೂರು 2

ಮಹಿಳೆಯ ಮೇಲೆ ಭೀಕರ ಅತ್ಯಾಚಾರ ಮತ್ತು ಮಾನಭಂಗ

ಮದರಾಸು 17— ಪಲಾವಂ ಕಲ್ಲಿನ ಗಣಿಯಲ್ಲಿ ಕೆಲಸಮಾಡುತ್ತಿದ 24 ವರ್ಷದ ಮಹಿಳೆಯನ್ನು ಅವಳ ಗಂಡನು ಅಲ್ಲಿ ಇಲ್ಲದಿದ್ದ ಸಮಯದಲ್ಲಿ ಕೆಲ ಮಂದಿ ಗಂಡಸು ಕೆಲಸಗಾರರು ಅವಳನ್ನು ಹತ್ತಿರದ ರಹಸ್ಯ ಸ್ಥಳಕ್ಕೆ ಎತ್ತಿಕೊಂಡು ಹೋಗಿ ಅಲ್ಲಿ ಅವಳವೇಲೆ ಭೀಕರ ಅತ್ಯಾಚಾರ ನಡೆಸಿ ಮಾನಭಂಗ ಮಾಡಿದರು ; ಹದಿನೊರು ಜನರು ಹೀಗೆ ಮಾಡಿದರೆಂದು ಅವಳು ಪೋಲೀಸರಿಗೆ ತಿಳಿಸಿದಳು : ಪೋಟೀಸರು ಅಕೆಯನ್ನು ಟ್ರೈಪ್ಲಿಕೇನಿನ ಕಸ್ತೂರಿಬಾ ಗಾಂಧಿ ಆಸ್ಪತ್ರೆಗೆ ಕಳುಹಿಸಿದರು — ಈ ಸಂದರ್ಭದಲ್ಲಿ ಐದು ಮಂದಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

★

ಚುನಾವಣಾ ತಕರಾರು ಅರ್ಜಿ

ನವದೆಹಲಿ 17 .... ಭಾರತಾದ್ಯಂತದಿಂದ ಇಲ್ಲೀವರೆಗೆ ಎಲೆಕ್ಷನ್ ಕಮಿಷನ್ನಿಗೆ 5 ಚುನಾವಣಾ ತಕರಾರು ಅರ್ಜಿಗಳು ಮಾತ್ರ ಬಂದಿವೆ : ಇಂತಹ ಅರ್ಜಿಗಳನ್ನು ಹಾಕಲು ಇನ್ನೂ 4 ವಾರಂಗಳಿವೆ ಅದರಿಂದ ಇನ್ನೆಷ್ಟು ಅರ್ಜಿಗಳು ಬರುತ್ತವೋ ನೋಡಬೇಕು !

ಅಲ್ಲೂ ಹೆಚ್ಚು ಮಂತ್ರಿಗಳು

ನವದೆಹಲಿ 17— ಭಾರತ ಸರ್ಕಾರದ ಮಂತ್ರಿಗಳ ಸಂಖ್ಯೆ 12 ರಿಂದ 15ಕ್ಕೆ ಹೆಚ್ಚಿಸಲಾಗುವುದೆಂದು ಹೇಳಲಾಗಿದೆ.

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಪಂಪಶ್ಯಾಸ್ತ್ರಜೋಯಿಸರಿಂದ
20 ಮಂಗಳವಾರ ಚತುರ್ದಶಿ ಪುಬ್ಬ
ಹೋಳೀಹಬ್ಬ

ಸೂಚನೆ— ನಾಳೆ ಹೋಳೀಹಬ್ಬದ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜ.

ಮೈಸೂರು ರಾಜ್ಯದಲ್ಲಿ ತೆರಿಗೆಗಳು ಹೆಚ್ಚುವುವು ?

ಬೆಂಗಳೂರು 18.... ಮೂಂದೇ ಯೋಜನೆಗೆ ರಾಜ್ಯದಲ್ಲಿ 110 ಕೋಟಿ ರೂಗಳನ್ನು ಒದಗಿಸಿಕೊಳ್ಳಬೇಕಾಗಿರುವುದರಿಂದ ಮೈಸೂರು ರಾಜ್ಯ ಪ್ರಜೆಗಳು ಇನ್ನೂ ಹೆಚ್ಚು ತೆರಿಗೆ ಕೊಡಲು ಸಿದ್ಧವಾಗಬೇಕೆಂದು ಮುಖ್ಯ ಮಂತ್ರಿ ಶ್ರೀ ಕಂಠಿಯವರು. ಅವರು ಮತ್ತು ಇತರ ಮಂತ್ರಿಗಳ ಅಭಿನಂದನಾ ಸಮಾರಂಭದಲ್ಲಿ, ಕೊಟ್ಟ ಉತ್ತರದಲ್ಲಿ ತಿಳಿಸಿದರು

★

ಹವನಾ 18.... ಕ್ಯೂಬಾದಲ್ಲಿ ಇಹಾರಾ ರೇಷನಿಂಗು ಜಾರಿಗೆ ತರಲಾಗಿದೆ.

ಡಾಕಾ 18.... ಕಾಶ್ಮೀರದ ಶಾಂತಿಯುತ ವ್ಯವಸ್ಥೆಯು ಸಾಧ್ಯವಿಲ್ಲವೆಂದು ಅಜಾದ ಕಾಶ್ಮೀರ ಸರ್ಕಾರದ ಅಧ್ಯಕ್ಷ ಕರ್ಷೀದರು ಹೇಳಿರುವರು

ಡಾಕಾ 18.... ಸುಲೈಮಾನವುಂದಲ್ಲಿ ಡಿಲ್ ಮಾಡಲಾಗುತ್ತಿದ್ದ ಬಾವಿಯಿಂದ ಅಕಸ್ಮಾತ್ತಾಗಿ ಗ್ಯಾಸ್ ಬಂದು 55 ಮಂದಿ ಸತ್ತರು

ಕರಾಚಿ 17— ಪಶ್ಚಿಮ ಪಾಕಿಸ್ತಾನ ಭಾಗದಲ್ಲಿ ಬುಡಕಟ್ಟು ಜನರಲ್ಲಿ ಒಂದು ತಿಂಗಳಲ್ಲಿ ಗುಂಡಿನ ಹೊಡೆದಾಟ ನಡೆದ 16 ಮಂದಿ ಸತ್ತರು.

ವಜೀರಿಸ್ತಾಲ್ 17— ದಕ್ಷಿಣ ಆಫ್ರಿಕಾ ಕಾಮನ್ವೆಲ್ತನ್ನು ಬಿಟ್ಟ ನಂತರ ಅದರ ಆರ್ಥಿಕ ಸ್ಥಿತಿ ಮುಂದುವರಿದಿದೆ ಎಂದು ಅಲ್ಲಿಯ ಪ್ರಧಾನಿ ಹೇಳಿರುವರು.

ಮಾಸ್ಕೋ 17— ಮಾಸ್ಕೋ ಮತ್ತು ಲೆನಿನ್‌ಗ್ರಾಡಿನ ವಧೆ ಓಡಾಡುವ ಎಲೆಕ್ಟ್ರಿಕ್ ರೈಲಿನಲ್ಲಿ ತಾಂತ್ರಿಕ ಎಂಜಿನಿಯರ್‌ನ್ನು ಉಪಯೋಗಿಸುವ ಪ್ರಯೋಗ ನಡೆಯುತ್ತಿದೆ

ಜೋಹಾನ್ಸ್‌ಬರ್ಗ್ 17— ಇಲ್ಲಿಗೆ 20 ಮೈಲಿ ದೂರದ ಬಿನ್ಯಾನಲ್ಲಿಯ ಒಂದು ಪಾರ್ಲಿಮೆಂಟ್ ಕಟ್ಟಡವು ಸುಟ್ಟುಹೋಯಿತು ; ಸಂದರ್ಭದಲ್ಲಿ ಕಟ್ಟಡ ಸುಟ್ಟುಹೋಗುತ್ತಿದ್ದಾಗ ಇಬ್ಬರು ಚೀಣಿಯರನ್ನು ಹಿಡಿಯಲಾಯಿತು ; ಈಗ ಇಬ್ಬರು ಶ್ವೇತಿಯರನ್ನು ಬಂಧಿಸಲಾಗಿದೆ.

★

ತಾಜ್ ಮಹಲ್

ಶ್ರೀಮತಿ ಕೆನಿಡಿಯವರು ತಾಜಮಹಲ್ ನೋಡಿ ತುಂಬಾ ಆನಂದಪಟ್ಟರು ಈ ಅತ್ಯಂತ ಸುಂದರ ಕಟ್ಟಡದ ಇತಿಹಾಸವು ಅವರ ವಸ್ಸಿಗೆ ತುಂಬಾ ನಾಟಿತು — ಮೊಗಲ್ ಚಕ್ರವರ್ತಿ ಷಹಜಹಾನ್ ತನ್ನ ಪ್ರಿಯ ಪತ್ನಿ ಮುತಾಜ್ ಬೇಗಮ್ಮಿನ ಸ್ಮಾರಕವಾಗಿ ನಿರ್ಮಿಸಿದ ವಿಷಯು ಎಲ್ಲರಿಗೂ ತಿಳಿದ ವಿಷಯವಾಗಿದೆ : 1632 ರಲ್ಲಿ ಕಟ್ಟಲು ಪ್ರಾರಂಭವಾದ ಇದು ಮುಗಿಯಲು 18 ವರ್ಷ ಕಾಲ ಹಿಡಿದು, 3 ಕೋಟಿ ರೂಗಳು ಖರ್ಚಾಗಿದೆ — ಬ್ರಿಟಿಷ್ ಗ್ರಂಥಾಲಯದಲ್ಲಿಗಿ ವಾರ್ಡ್‌ಹೇಸ್ಟಿಂಗ್ಸ್‌ನು ಇದನ್ನು ಕೀಲಿಸಿ, ಕಟ್ಟಡದ ಅವೃತಶಿಲೆಗಳನ್ನು ಮಾತಿ ಬಿಡಬೇಕೆಂದಿದ್ದನಂತೆ : ಆದರೆ ಅದರಿಂದ ಸ್ವಲ್ಪ ಹಣ ಬರುವುದೆಂದು ತಿಳಿದನಂತರ ಸುಮ್ಮನಾದನಂತೆ !

ಪ್ರಮುಖ ವೃತ್ತಾಂತಗಳು

ನವದೆಹಲಿ 17— ಭಾಂಕ ಗೆಜಿಡ್ಡನ ಕೆಲವು ಅರಿಸಲ್ಪಡುವ ಭಾಗಗಳು ಹಿಂದಿಯಲ್ಲೂ ಈ ವರ್ಷದಿಂದ ಪ್ರಕಟವಾಗುವುದೆಂದು ನಂದಿಯಾಗಿದೆ.

ಗ್ವಾಟಮಾಲಾ ನಗರ 17— ಗುಟೆನಾಲಾ ರಾಜಧಾನಿ ನಗರದ ಅಡಳಿತವನ್ನು ಸೈನ್ಯ ತೆಗೆದ.ಕೊಂಡಿದೆ.

ತಿರುಪತಿ— ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯಕ್ಕೆ 61-62 ನೇ ಸಾಲಿನಲ್ಲಿ 124 ಲಕ್ಷ ರೂ ಉತ್ಪತ್ತಿಯಾಗಿದೆ : ಅಂದರೆ ಹಿಂದಿನ ವರ್ಷಕ್ಕಿಂತ 20 ಲಕ್ಷ ಹೆಚ್ಚು.

ಹಾಂಕಾಂಗ್ 17— ಲೆಫ್ಟೋಟಿಯಾ ದೇಶಭಕ್ತಿ ಸೈನ್ಯದವರು ಒಂದು ವಿಮಾನವನ್ನು ಹೊಡೆದುರುಳಿಸಿದರೆಂದೂ ಅದರಲ್ಲಿದ್ದ ಐದು ಮಂದಿ ಅಮೇರಿಕನ್ನರನ್ನು ಸತ್ತು ಹೋದರೆಂದೂ ವಂದಿಯಾಗಿದೆ.

ನವದೆಹಲಿ 17— 1961 ನೇ ಅಕ್ಟೋಬರಿನಿಂದ ಚೀನಾದಿಂದ ಹೊಸ ಅಕ್ರಮಣ ನಡೆದಿಲ್ಲವೆಂದೂ, ಭಾರತಕ್ಕೆ ಲಡಕ್ ಭಾಗದಲ್ಲಿ ಸೇರಿರುವ 14000 ಚದರು ಮೈಲಿಗಳಲ್ಲಿ 12000 ಚದುರ ಮೈಲಿಗಳಷ್ಟು ಅಕ್ರಮಿತವಾಗಿರುವುದೆಂದೂ ಸ್ಪಷ್ಟವಾಗಿದೆ

ನವದೆಹಲಿ 17— ಶ್ರೀ ಸಂಜೀವರೆಡ್ಡಿಯವರ ಸ್ಥಾನದಲ್ಲಿ ಶ್ರೀ ಅತುಲ ಘೋಷರು ಕಾಂಗ್ರೆಸ್ಸ ಅಧ್ಯಕ್ಷರಾಗುವರೆಂದು ಹೇಳಲಾಗಿದೆ — ಈಗ ಇವರು ಕಾಂಗ್ರೆಸ್ಸ ಕಾರ್ಯಕಾರಿ ಸಮಿತಿಯ ಏಳು ಮಂದಿ ಪ್ರಾಯೋಗಿಕ ಸದಸ್ಯರಲ್ಲಿ ಒಬ್ಬರಾಗಿದ್ದಾರೆ.

ತಿರುಪತಿ— ಶ್ರೀ ವೆಂಕಟೇಶ್ವರಸ್ವಾಮಿಗೆ ಜನರು ಮಾಡಿಕೊಡುವುದರಿಂದ ದಾಖಲಾತಿ ಉತ್ಪತ್ತಿ ದೊರೆತಿದೆ — ಜನವರಿ 1 ರಿಂದ ಮಾರ್ಚ್ 10 ರವರೆಗೆ ರೂ. 54721 ಉತ್ಪತ್ತಿಯಾಗಿದೆ : ಇದರಲ್ಲಿ ದೇವಸ್ಥಾನಕ್ಕೆ ಕಾಲು ಭಾಗ ದೊರೆತು, ಉಳಿಕ್ಕಿದ್ದು ಕಲ್ಯಾಣಕಟ್ಟೆ ವಿಚಾರಪದಾರಿಗೆ ಹೋಗುತ್ತದೆ — ಈ ಕೂದಲುಗಳು ತ್ರಾಲರು ಸಂಪ್ರದಾಯವಾಗಿ ಕತ್ತರಿಸಿದ್ದು ಎಂದು ಹೇಳಲಾಗಿದೆ.

ಕಲ್ಕತ್ತಾ 17— ಬೊಂಬಾಯಿನ 'ವುಮೆನ್ಸ್ ಓನ್ ವೀಕ್ಲಿ' ಯು ಜನವರಿ 13 ನೇ ತಾ || ಸಂಚಿಕೆಯಲ್ಲಿ 'ಬಂಗಾಳಿ' ಎಂಬ ಲೇಖನದಲ್ಲಿ, ನೇತಾಜಿ ಸುಭಾಷಚಂದ್ರ ಬೋಸರು ದೇಶದ್ರೋಹಿ ಎಂದು ಸಂಬೋಧಿಸುವುದಕ್ಕಾಗಿ ಆ ಪತ್ರಿಕೆಯ ಸಂಪಾದಕ ಪ್ರಕಾಶಕ ಹೆಮಿಲ್ಟನ್ನಂ ವೀಲರ್ ವೊಂಬದ್ದಮೆ ಹೂಡಲಾಗಿದೆ; ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಹೊಡಿಸಿದ ಸಮನ್ಸಿಗೆ ಹೆಮಿಲ್ಟನ್ನ ಹಾಜರಾಗಿ ರೂ. 1000 ಸ್ವಂತ ಮುಚ್ಚಳಿಕೆ ಬರೆದುಕೊಟ್ಟು ಬಿಡುಗಡೆಯಾದರು ವಿಚಾರಣೆ ಏಪ್ರಿಲ್ 3 ಕ್ಕೆ ಇದೆ

*

ಕಾಶಿಯಲ್ಲಿ ಶ್ರೀಮತಿ ಕೆನೆಡಿ

ವಾರಣಾಸಿ 17 — ಶುಕ್ರವಾರ ಶ್ರೀಮತಿ ಕೆನೆಡಿಯವರು ಗಂಗಾನದಿಯಲ್ಲಿ ದೋಣಿ ಪ್ರವಾಸ ಮಾಡಿದರು ; ಅವರ ಗೌರವಾರ್ಥವಾಗಿ ವಿಶೇಷ ಪೂಜೆಗಳೂ ದೇವಾಲಯಗಳ ಘಂಟಾನಾದಗಳೂ ನಡೆದವು — ಬುದ್ಧನು 2500 ವರ್ಷಗಳ ಹಿಂದೆ ಬುದ್ಧನು ಇಲ್ಲಿ ಪ್ರಥಮ ಧರ್ಮೋಪದೇಶ ಮಾಡಿದಾಗ ಕಾಶಿಯು ಅತ್ಯಂತ ಮೌನ ಸ್ಥಿತಿಯಲ್ಲಿದ್ದಿತು — ಶ್ರೀಮತಿ ಕೆನೆಡಿಯವರು ಇಲ್ಲಿಗೆ ಐದು ಮೈಲಿ ದೂರದ ಸಾರನಾಥಕ್ಕೂ ಭೇಟಿ ಇತ್ತರು , ಅಲ್ಲಿಯ ಮೂಲಗಂಧ ವಿಹಾರಕ್ಕೆ ಹೋದಾಗ ಬೌದ್ಧ ಯತಿಗಳು ಬುದ್ಧದೇವನ ಅನುಗ್ರಹಕ್ಕಾಗಿ ಪ್ರಾರ್ಥನೆ ಸಲ್ಲಿಸಿದರು — ವಿಹಾರಕ್ಕೆ ಪ್ರವೇಶಿಸುವುದಕ್ಕೆ ಮುಂಚೆ ಶ್ರೀಮತಿ ಕೆನೆಡಿಯವರು ಜೋಡಿನ ತೆಗೆದುಹಾಕಿ ಒರೀಕಾಲಿನಲ್ಲಿ ಒಳಕ್ಕೆ ಪ್ರವೇಶಿಸಿದರು ; ಹೊಳೆಯುತ್ತಿರುವ ಬುದ್ಧದೇವನ ಪ್ರತಿಮೆಯ ಮುಂದೆ ಸ್ವಲ್ಪ ಕಾಲ ಭಕ್ತಿಪೂರ್ವಕವಾಗಿ ನಿಂತಿದ್ದರು — ಅಲ್ಲಿದ್ದ ವಿಜಿಟರ್ಸ್ ಪುಸ್ತಕದಲ್ಲಿ ರುಜು ಮಾಡಿದರು. — ಆರ್ಕಲಾಜಿಕಲ್ ಮ್ಯೂಸಿಯಂಗೆ ಭೇಟಿ ಇತ್ತು ಅಲ್ಲಿಯ ಪದಾರ್ಥಗಳನ್ನೆಲ್ಲಾ ನೋಡಿ ಆನಂದಿಸಿದರು.

ವುಡ್‌ಲ್ಯಾಂಡ್ಸ್ ತೇಜಸ್ವಿ 6 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ- ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— 15—3—62 ರಿಂದ

ಅಡುತ ವೀಟು ಪೆಣ್ (ತಮಿಳು)

ಪಾತ್ರ— ಅಂಜಲೀದೇವಿ, ಟಿ ಆರ್. ರಾಮಚಂದರ್, ಫ್ರೆಂಡ್ ರಾಮಸ್ವಾಮಿ

ಕರುಣಾನಿಧಿ [ದಿನವಹಿ 3 ಆಟಗಳು]

SHAKTI

SUDHA

A Superb Tonic

Help The 'Gorakshana'

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ



" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.